ಸಕಲೇಶಪುರ ತಾಲ್ಲೂಕಿನಲ್ಲಿ ರೈತರಿಗೆ ಪರಿಹಾರ

148 (716) ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) ಮಾನ್ಯ ಅರಣ್ಯ ರಾಜ್ಯ ಸಚಿವರು:- ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ) ಸಕಲೇಶ್ವರ ತಾಲ್ಲೂಕಿನಲ್ಲಿ ಆನೆಗಳ ತುಳಿತದಿಂದ ಬೆಳೆ ಸಂಪೂರ್ಣವಾಗಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈವರೆವಿಗೂ ಸದರಿ ರೈತರಿಗೆ ಸರ್ಕಾರದವರು ಪರಿಹಾರವನ್ನು ಕೊಡಲು ಕೈಗೊಂಡಿರುವ ಕ್ರಮವೇನು (ಪರಿಹಾರ ನೀಡಿರುವ ವಿವರ ನೀಡುವುದು)?

ಶ್ರೀ ಈ. ಟಿ. ಶಂಭುನಾಥ್:- (ಅರಣ್ಯ ರಾಜ್ಯ ಸಚಿವರು)

ಅ) ಹೌದು.

ಆ) 1991-92ನೇ ಸಾಲಿಗೆ ಮೂರು ಬೆಳೆಹಾನಿ ಪ್ರಕರಣಗಳಲ್ಲಿ 3,500-00 ರೂ.ಗಳನ್ನು ಈಗಾಗಲೇ ನೀಡಲಾಗಿದೆ. 1991-92ನೇ ಸಾಲಿನ 7 ಪ್ರಕರಣಗಳಿಗೆ ಪರಿಹಾರ ಧನವನ್ನು ನೀಡುವ ಕುರಿತು ಕ್ರಮಕೈಗೊಳ್ಳಲಾಗುತ್ತಿದೆ.

ಬಗರ್ ಹುಕಂ ಭೂಮಿಯನ್ನು ಸಕ್ರಮಗೊಳಿಸುವುದು

151 (793) ಶ್ರೀ ಎಸ್. ಜಯಣ್ಣ (ಚಳ್ಳಕೆರೆ) ಮಾನ್ಯ ಕಂದಾಯ ಸಚಿವರು:- ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಗರ್ ಹುಕಂ ಜಮೀನುಗಳನ್ನು ಒಡವರಿಗೆ ಖಾಯಂಗೊಳಿಸುವ ಸಲುವಾಗಿ ಸರ್ಕಾರ ತೆಗೆಮಕೊಂಡ ಕ್ರಮಗಳೇನು?

ಆ) ಹಾಗಿದ್ದಲ್ಲಿ ಜಮೀನುಗಳ ಅಳತೆಗಳ ಕಾರ್ಯಕ್ಕಾಗಿ ಸರ್ವೇಯರುಗಳನ್ನು ತಾಲ್ಲೂಕಿಗೆ ಕಳಿಸಿದೆಯೇ?

ಇ) ಹಾಗಿದ್ದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ ಸರ್ವೇಯರುಗಳ ಕೊರತೆಯಿಂದಾಗಿ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಬಗರ್ ಹುಕಂ ಸಾಗುವಳಿಯನ್ನು ಖಾಯಂ ಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ನಿಯಮ 94ಕ್ಕೆ ತಿದ್ದುಪಡಿ ತರಲಾಗಿದೆ.

ಆ) ಸಾಕಷ್ಟು ಸರ್ವೇಯಲುಗಳನ್ನು ಸದರಿ ಜಮೀನುಗಳ ಅಳತೆಯನ್ನು ಮಾಡಲು ನೇಮಿಸುವ ಸಲುವಾಗಿ ನಿರ್ದೇಶಕರು, ಭೂ ಮಾಪನ ಹಾಗೂ ಭೂ ದಾಖಲೆ ಇಲಾಖೆಯನ್ನು ಸಂಪರ್ಕಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಇ) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಇವರು ಈಗಾಗಲೇ ಇಬ್ಬರು ಸರ್ವೇಯರುಗಳನ್ನು ದಿನಾಂಕ 25-2-92 ರಿಂದ ಸದರಿ ಕೆಲಸವನ್ನು ನಿರ್ವಹಿಸಲು ಚಳ್ಳಕೆರೆ ತಾಲ್ಲೂಕಿಗೆ ಕಳುಹಿಸಲಾಗಿದೆ.

ಯಡಿಯೂರು ಸಿದ್ದಲಿಂಗೇಶ್ವರ ಸ್ವಾಮಿ ಟ್ರಸ್ಟನಲ್ಲಿ ಅವ್ಯವಹಾರ

ಶ್ರೀ ಎಂ. ಕೆ. ಪಟ್ಟಣ ಶೆಟ್ಟಿ (ಬಾದಾಮಿ) ಮಾನ್ಯ ಧಾರ್ಮಿಕ ದತ್ತಿ ಸಚಿವರು:- ಈ ವಿಷಯಗಳನ್ನು ತಿಳಿಸುವಿರೇ?

ಅ) ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ಸ್ವಾಮಿ ಟ್ರಸ್ಟ್‌ನಲ್ಲಿ ಅವ್ಯವಹಾರಗಳು ನಡೆದ ಬಗ್ಗೆ ದೂರುಗಳು ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು?